Amalgamation of Agriculture and Horticulture Departments

835. Sri A. MUNIYAPPA (Bagepalli).—

Will the Minister for Agriculture be pleased to state :—

Whether they have taken any action to amalgamate Agriculture and Horticulture Departments into one Department ?

Sri B. RACHAIAH (Minister for Agriculture).—

No.

ಶ್ರೀ ಎ. ಮುನಿಯಪ್ಪ.—ಸ್ವಾಮಿ, ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಒಂದೇ ಇಲಾಖೆಯಾಗಿ ಪರಿವರ್ತಿಸಲು ಸರ್ಕಾರದವರು ಏನಾದರೂ ಕ್ರಮವನ್ನು ಕೈಗೊಂಡಿದ್ದಾರೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಈಗ ಖೋತಾ ಬಿದ್ದಿರುವ ಹಣವನ್ನು ಭರ್ತಿ ಮಾಡುವುದಕ್ಕೆ ಭೂತಲಿಂಗಂ ಅವರ ಕಮಿಟಿಯನ್ನು ನೇಮಕ ಮಾಡಿದ್ದೀರಿ, ಅವರು ಇಲಾಖೆಗಳನ್ನು ಕಡಿಮೆ ಮಾಡಿಕೊಳ್ಳಬೇಕೆಂದರೆ ಕಡಿಮೆ ಮಾಡಿಕೊಳ್ಳುತ್ತೀರಾ ಅಥವಾ ಆ ಹಣವನ್ನು ರೈತರ ಮೇಲೆ ಹಾಕುತ್ತೀರಾ ?

ಶ್ರೀ ಬಿ. ರಾಚಯ್ಯ.—ಪೇ ಕಮಿಷನ್ ರಿಪೋರ್ಟಿನಲ್ಲಿ ಕೂಡ ಇದನ್ನು ಒಂದುಗೂಡಿಸಬೇಕು ಎಂದು ಹೇಳಿಲ್ಲ. ಆದ್ದರಿಂದ ಈ ಎರಡು ಇಲಾಖೆಗಳನ್ನು ಒಂದುಗೂಡಿಸುವ ಪರ್ಯಾಲೋಚನೆ, ಪ್ರಯತ್ನ ಈಗ ಸರಕಾರಕ್ಕೆ ಇಲ್ಲ ಎಂದು ನಾನು ಹೇಳಿದ್ದೇನೆ.

ಶ್ರೀ ಎ. ಮುನಿಯಪ್ಪ.—ಈಗ ಖೋತಾ ಬಿದ್ದಿರುವ ಹಣವನ್ನು ಭರ್ತಿ ಮಾಡುವುದಕ್ಕೆ ಅದನ್ನು ರೈತರ ಮೇಲೆ ಹಾಕುವುದಕ್ಕೆ ಬದಲಾಗಿ ನಿಮ್ಮ ಇಲಾಖೆಗಳಲ್ಲೇ ಮಿತವ್ಯಯವನ್ನು ಏತಕ್ಕೆ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಪೇ-ಕಮಿಷನ್ ರಿಪೋರ್ಟ್ ಪ್ರಕಾರ ಎಲ್ಲೆಲ್ಲಿ ಮಿತವ್ಯಯ ಮಾಡಬೇಕಾಗಿದೆಯೋ ಅಲ್ಲೆಲ್ಲಾ ಸಂಪೂರ್ಣವಾಗಿ ಮಿತವ್ಯಯ ಮಾಡುವುದಕ್ಕೆ ಇನ್ನೂ ಸಂಪೂರ್ಣವಾದ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಈ ಇಲಾಖೆಗಳನ್ನು ಒಂದುಗೂಡಿಸುವುದಕ್ಕೆ ಬಡಿಲಾಗಿ ಎಲ್ಲೆಲ್ಲಿ ಮಿತವ್ಯಯ ಸಾಧಿಸುವುದಕ್ಕೆ ಸಾಧ್ಯ ಇದೆಯೋ ಅಲ್ಲೆ ಮಿತವ್ಯಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಎಂದು ಎರಡು ಇಲಾಖೆಗಳನ್ನು ನಿರ್ಮಾಣ ಮಾಡಿದ್ದೀರಿ. ಈ ತೋಟಗಾರಿಕೆ ಇಲಾಖೆಯಿಂದ ಇಡೀ ರಾಜ್ಯಕ್ಕೆ ಉಪಯೋಗವಾಗುತ್ತಿದೆಯೇ ಅಥವಾ ವೈಯುಕ್ತಿಕವಾಗಿ ಯಾರಿಗಾದರೂ ಅನುಕೂಲ ಮಾಡಿಕೊಡಬೇಕೆಂದು ಈ ಇಲಾಖೆಯನ್ನು ನಿರ್ಮಾಣ ಮಾಡಿದಿರೋ ? ಮತ್ತು ಎರಡು ಇಲಾಖೆಗಳನ್ನು ಸೇರಿಸಿ ಒಂದೇ ಇಲಾಖೆಯನ್ನಾಗಿ ಪರಿವರ್ತಿಸಿದರೆ ಉತ್ಪಾದನೆ ಜಾಸ್ತಿಯಾಗಿ ಖರ್ಚು ಕಡಿಮೆಯಾಗುವುದಿಲ್ಲವೆ ?

ಶ್ರೀ ಬಿ. ರಾಚಯ್ಯ.—1963ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆ ಪ್ರತ್ಯೇಕವಾಯಿತು. ಈ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ವಿಚಾರ ಮಾಡಲು ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಸರ್ಕಾರದವರು ಮಾಡಿದ್ದರು. ಆ ಕಮಿಟಿಯವರು ಈ ಇಲಾಖೆಯ ಕಾರ್ಯಚಟುವಟಿಕೆಗಳು ಬಹಳ ಹೆಚ್ಚಾಗಿದೆ, ಅದಕ್ಕೋಸ್ಕರ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡುವುದಕ್ಕೆ ಸಾಕಷ್ಟು ಸರಕಾರಣಗಳು ಇವೆಯೆಂದು ಶಿಫಾರಸ್ಸು ಮಾಡಿದ್ದರು. ಅದರ ಪ್ರಕಾರ ಮಾಡಿದ್ದೇವೆ.

Sri C. K. RAJAIAH SHETTY.—In view of the serious developmental programmes under the Fourth Plan, it is not desirable to merge these two departments, is it not Sir ?

ಶ್ರೀ ಬಿ. ರಾಚಯ್ಯ.—ಅದು ಇನ್ನೂ ಯೋಚನೆ ಮಾಡಬೇಕಾದ ವಿಷಯ.

ಶ್ರೀ ಎಸ್. ಎಂ. ಗುರೆಡ್ಡಿ.—ತೋಟಗಾರಿಕೆ ಇಲಾಖೆ ಬಹಳ ಮಹತ್ವದ ಇಲಾಖೆಯಾಗಿದೆ. ಏಕೆಂದರೆ ಬಹಳಷ್ಟು ಆಹಾರವನ್ನು ತೋಟಗಾರಿಕೆ ಇಲಾಖೆಯಿಂದ ಪಡೆಯುತ್ತಿದ್ದೇವೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ರುವ ಇಲಾಖಾ ಆಫೀಸರನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದು ಯೋಚನೆ ಮಾಡುವ ವಿಷಯವಾಗಿದೆ. ಈ ಇಲಾಖೆಗೆ ನರ್ಕಾರದವರು ಹಣವನ್ನು ಒದಗಿನುವುದರ ಮೇಲೆ ಈ ವಿಸ್ತರಣಾ ಕಾರ್ಯ ಅವಲಂಬಿಸಿದೆ.

ಶ್ರೀ ಎನ್. ಎ. ಜನ್ನೇಗೌಡ.—1963ರಲ್ಲಿ ತೋಟಗಾರಿಕೆ ಇಲಾಖೆಯನ್ನು ರಚನೆ ಮಾಡಲಾಯಿತು ಎಂದು ಹೇಳಿದಿರಿ. ಈ ಇಲಾಖೆಯಲ್ಲಿ ಹೆಚ್ಚು ಅಭಿವೃದ್ಧಿ ಕೆಲನಗಳು ನಡೆದು ತಮ್ಮ ಕಾಲಮೇಲೆ ತಾವು ನಿಂತುಕೊಂಡು ನಂಪಾದನೆ ಮಾಡುವ ವ್ಯವಸ್ಥೆಯಲ್ಲಿ ಇಲ್ಲವೆ ಮತ್ತು ವ್ಯವನಾಯ ಇಲಾಖೆಯಲ್ಲರುವ ಅಧಿಕಾರಿಗಳು ಬಹಳವಾಗಿ ಕೆಲನವನ್ನೇ ಮಾಡದೆ ಕಾಲ ಕಳೆಯುತ್ತಿಲ್ಲವೆ ?

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಲ್ಲಿ ಹೆಚ್ಚು ಕೆಲನಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಈ ಇಲಾಖೆಗೆ ಖರ್ಚು ಎಷ್ಟು ಇದೆ ಅಷ್ಟೇ ನಂಪಾದನೆಯೂ ಇದೆ ಎಂಬುದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ವ್ಯವನಾಯ ಇಲಾಖೆಯಲ್ಲಿ ಇರತಕ್ಕಂಥ ಅಧಿಕಾರಿಗಳು ವ್ಯರ್ಥಾ ಕಾಲ ಕಳೆಯುತ್ತಿದ್ದಾರೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

Recruitment of S. C. and S. T. and other Communities to I. A. S./I.P.S.

836. **Sri A. MUNIYAPPA** (Bagepalli).—

Will the Chief Minister be pleased to state :—

(*a*) of the candidates from Mysore State who had taken the IAS/IPS Examinations since 1962 to date, how many were recommended by the State Government for selection to the IAS/IPS ; how many of them belonged to Scheduled Castes/Scheduled Tribes/and other communities ; the names of the candidates recommended and the dates on which recommendations were made may be furnished ;

(*b*) the number of candidates who were successful at these examinations but were not selected for appointment to the IAS/IPS posts ; how many of them belonged to Scheduled Castes/Scheduled Tribes ; furnish their names ;

(*c*) whether the Social Welfare Department has taken any action to recommend the selection of Scheduled Castes/Tribes candidates to these services ;

(*d*) if candidates successful in these examinations are not appointed to the service, do the State Government propose to take up their case for appointment to the Service ?